

# ಫಿಲ್ಮ್ ಬಜಾರ್‌ನಲ್ಲಿ ಪೆದ್ರೊ

‘ಕುರ್ಲಿ’ ಮತ್ತು ‘ನಮಗೆ ನಾವೇ ಗೋಡೆಗೆ ಮಣ್ಣು’ ಎಂಬ ಎರಡು ಕಿರುಚಿತ್ರಗಳ ಮೂಲಕ ತಮ್ಮ ಪ್ರತಿಭೆ ಸಾಬೀತುಗೊಳಿಸಿದ್ದ ಯುವನಿರ್ದೇಶಕ ನಟೇಶ ಹೆಗಡೆ.

ತಮ್ಮ ಒರಿಜಿನಾಲಿಟಿ ಮತ್ತು ವಿಶಿಷ್ಟ ಕಟ್ಟೋಣಗಳಿಂದ ಗಮನಸೆಳೆಯುವ ನಟೇಶ್ ಇದೀಗ ಪೂರ್ಣ ಪ್ರಮಾಣದ ಸಿನಿಮಾ ನಿರ್ದೇಶನದಲ್ಲಿ ತೊಡಗಿದ್ದಾರೆ. ‘ಪೆದ್ರೊ’ ಅವರ ನಿರ್ದೇಶನದ ಮೊದಲ ಸಿನಿಮಾ ಹೆಸರು. ಹಳ್ಳಿಯೊಂದರಲ್ಲಿ ನಡೆಯುವ ಈ ಕಥೆ, ಊರಗಾಥೆಯ ಮೂಲಕವೇ ಮನುಷ್ಯನ ಮೂಲಸ್ವಭಾವಗಳನ್ನು ಶೋಧಿಸುವ ಪ್ರಯತ್ನ ಮಾಡುತ್ತದೆ. ಸದ್ಯಕ್ಕೆ ಚಿತ್ರೀಕರಣ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ತಮ್ಮಮೊದಲ ಪ್ರಯತ್ನದ ಆರಂಭದಲ್ಲಿಯೇ ನಟೇಶ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆದಿದ್ದಾರೆ. ಪ್ರತಿಷ್ಠಿತ ಫಿಲ್ಮ್ ಬಜಾರ್‌ನ 2019ನೇ ಸಾಲಿನ ಪ್ರಶಂಸನಾ ಪ್ರಶಸ್ತಿಗೆ ಆಯ್ಕೆಯಾಗಿದೆ. ಅಂತಿಮ ಸುತ್ತಿಗೆ ಆಯ್ಕೆಯಾದ ಐದು ಸಿನಿಮಾಗಳಲ್ಲಿ ನಟೇಶ್ ಅವರ ‘ಪೆದ್ರೊ’ ಮತ್ತು ಅಜಿತ್‌ಪಾಲ್ ಸಿಂಗ್ ಅವರ ‘ಸ್ವಿಟ್ಜರ್‌ಲೆಂಡ್’ ಸಿನಿಮಾಗಳು ಪ್ರಶಸ್ತಿಯನ್ನು ಪಡೆದಿವೆ.

ಈ ಸಿನಿಮಾಗಳಿಗೆ, ಫಿಲ್ಮ್ ಬಜಾರ್ ವರ್ಕ್ ಇನ್ ಪ್ರೊಗ್ರೆಸ್ ಯೋಜನೆಯ ಅಡಿಯಲ್ಲಿ, ಪ್ರಸಾದ್ ಲ್ಯಾಬ್, ಉಚಿತವಾಗಿ ಡಿಜಿಟಲ್ ಇಂಟರ್‌ಮೀಡಿಯೆಟ್ ಸೌಲಭ್ಯ ನೀಡುತ್ತದೆ. ಕ್ಯೂಬ್ ಸಂಸ್ಥೆಯು 2800 ಡಾಲರ್ ಹಣವನ್ನು ಟ್ರೈಲರ್ ಪ್ರೊಮೋಷನ್‌ಗೆ ನೀಡುತ್ತದೆ.

ರಿಷಭ್ ಶೆಟ್ಟಿ ನಿರ್ಮಾಣದ ‘ಪೆದ್ರೊ’ ಸಿನಿಮಾದಲ್ಲಿ ರಾಜ್ ಶೆಟ್ಟಿ, ಗೋಪಾಲ್ ಹೆಗಡೆ, ಮೇದಿನಿ ಕೆಳಮನೆ ಮುಖ್ಯಪಾತ್ರಗಳಲ್ಲಿ ನಟಿಸಿದ್ದಾರೆ. ವಿಕಾಸ್ ಅರಸ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ■

# ‘ಕಾಡು’ವ ಹುಡುಗಿ

ನಭಾ ನಟೇಶ್ ಬುಡಕಟ್ಟು ಹುಡುಗಿಯಾಗಿದ್ದಾರೆ! ಇದೇನು ಹೀಗೆ? ಗ್ಲ್ಯಾಮರ್ ಗೊಂಬೆ ಕಾಡಿಗೆ ಹೋಗಿದ್ಯಾಕೆ ಎಂಬೆಲ್ಲ ಪ್ರಶ್ನೆಗಳಿಗೆ ಅವರ ಇತ್ತೀಚೆಗಿನ ಫೋಟೊಶೂಟ್ ಉತ್ತರ ನೀಡುತ್ತವೆ.

ಕನ್ನಡದ ಹುಡುಗಿ ನಭಾ ಅದೃಷ್ಟದ ಬಳ್ಳಿ ಚಿಗುರೊಡೆದಿದ್ದು ಮಾತ್ರ ತೆಲುಗಿನಲ್ಲಿ. ಸದ್ಯಕ್ಕೆ ಇವರು ತೆಲುಗಿನ ಖ್ಯಾತನಾಮ ನಟರ ಸಿನಿಮಾಗಳಲ್ಲಿ ನಟಿಸುವುದರಲ್ಲಿ ಬ್ಯುಸಿ. ರವಿತೇಜ ಜೊತೆಗೂ ಅವರು ಅವರು ತೆರೆ ಹಂಚಿಕೊಳ್ಳಲು ಸಜ್ಜಾಗಿದ್ದಾರೆ. ಹೀಗೆ ನಟನಾಬದುಕಿನ ಗ್ರಾಫ್ ಏರಿಕೆಯಾಗುತ್ತಿರುವ ಕಾಲದಲ್ಲೇ ಅವರು ಒಂದು ಫೋಟೊಶೂಟ್ ಮೂಲಕ ಅಭಿಮಾನಿಗಳನ್ನು ಅಚ್ಚರಿಗೆ ಕೆಡವಿದ್ದಾರೆ.

ಸಿನಿಮಾ ನಟಿಯರು ಫೋಟೊಶೂಟ್ ಮಾಡಿಸುವುದು ಹೊಸ ವಿಷಯ ಏನಲ್ಲ. ಆಗಾಗ ಫೋಟೊಶೂಟ್ ಮಾಡಿಸುವುದು, ಅದನ್ನು ಸೋಷಿಯಲ್ ಮೀಡಿಯಾಗಳಲ್ಲಿ ಹಂಚಿಕೊಳ್ಳುವುದು ನಡೆದೇ ಇರುತ್ತದೆ. ಆದರೆ ನಭಾ ಫೋಟೊಶೂಟ್‌ನಲ್ಲಿ ಒಂದು ವಿಶೇಷವಿದೆ. ಅದು ಅವರ ಲುಕ್‌ಗೆ ಸಂಬಂಧಪಟ್ಟಿದ್ದು.

ಆದಿವಾಸಿಗಳನ್ನು ನೆನಪಿಸುವ ಲುಕ್‌ನಲ್ಲಿ ನಭಾ ಫೋಟೊಶೂಟ್ ಮಾಡಿಸಿಕೊಂಡು ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಹಣೆಯ ಮೇಲೆ, ಕೈಗಳ ಮೇಲೆ ಬಿಳಿ ಬಣ್ಣದಲ್ಲಿ ಚಿತ್ತಾರ ಮಾಡಿಕೊಂಡು ಹುಲ್ಲುಗಾವಲಿನಲ್ಲಿ ಕೂತಿರುವ ಫೋಟೊಗಳಿಗೆ ಸೋಷಿಯಲ್ ಮೀಡಿಯಾದಲ್ಲಿಯೂ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದೆ. ■

